ಪಾಸ್ ಬೇಕೆಂದು ಕೇಳಿದ್ದೆವು. ದಯವಿಟ್ಟು ಅದನ್ನು ಮಾಡಬೇಕು. ಇದನ್ನು ಮೊದಲೇ ಇಸ್ಕಾನ್ ಮುಂದೆ ಮಾಡಿ ಎಂದು ಮೆಟ್ರೋ ರೈಲಿನವರಿಗೂ ಕೇಳಿದೆವು, ಅದೂ ಮಾಡಲಿಲ್ಲ. ಹಾಗಾಗಿ, ಅಲ್ಲಿ ತುಂಬ ಅನಾಹುತಗಳು, ಅಪಘಾತಗಳಾಗುತ್ತಿವೆ. ತಾವು ಆ ಬಗ್ಗೆ ಆಸಕ್ತಿ ವಹಿಸಿದರೆ ಒಳ್ಳೆಯದು.

ಶ್ರೀ ಎಸ್. ಸುರೇಶ್ ಕುಮಾರ್: ಅದನ್ನು ಪರಿಶೀಲಿಸುತ್ತೇವೆ.

80(146) ಮತ್ತು 81(432) (ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಶುದ್ಧ ಕುಡಿಯುವ ನೀರು ಸರಬರಾಜು

82(92) ಶ್ರೀ ಹೆಚ್.ಸಿ ಬಾಲಕೃಷ್ಣ(ಮಾಗಡಿ) :– ನಗರಾಭಿವೃದ್ಧಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು)

(ಅ) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬೈರಮಂಗಲ ಕೆರೆಗೆ ಬೆಂಗಳೂರಿನ ಕಲುಷಿತ ನೀರು ಬರುತ್ತಿರುವುದರಿಂದ ಸುತ್ತಮುತ್ತಲ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಬೈರಮಂಗಲ ಕೆರೆಯನ್ನು ಪುನಶ್ಚೇತನಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಈ ಕೆರೆಯನ್ನು ಪುನಶ್ಚೇತನಗೊಳಿಸಲು ಇದುವರೆವಿಗೂ ಎಷ್ಟು ಹಣವನ್ನು ಬಿಡುಗಡೆಗೊಳಿಸಲಾಗಿದೆ;

(ಇ) ಬೈರಮಂಗಲ ಕೆರೆಯು ಕಲುಷಿತಗೊಂಡಿರುವುದರಿಂದ ಶುದ್ಧ ಕುಡಿಯುವ ನೀರು ದೊರೆಯದೆ ಸುತ್ತಮುತ್ತಲ ಮೂರು ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿರುವುದರಿಂದ ಕಾವೇರಿ ನೀರನ್ನು ಎಷ್ಟು ಅವಧಿಯಲ್ಲಿ ಒದಗಿಸಲಾಗುವುದು;

(ಈ) ಈ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ ?

ಶ್ರೀ ಎಸ್. ಸುರೇಶ್ ಕುಮಾರ್: (ನಗರಾಭಿವೃದ್ಧಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು)

(ಅ) ಹೌದು

(ಆ) ಬೈರಮಂಗಲ ಕೆರೆಯ ಪುನಶ್ಚೇತನದ ಕಾರ್ಯವು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದೆ.

ಆದಾಗ್ಯೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ ಹಾಗೂ ಹೊರ ವಲಯದಲ್ಲಿ ಉತ್ಪತ್ತಿಯಾಗುವ ಒಳಚರಂಡಿ ತ್ಯಾಜ್ಯ ನೀರು ವೃಷಭಾವತಿ ಕಣಿವೆಯ ಎಡ ಹಾಗೂ ಬಲ ಭಾಗಗಳಿಂದ ನೇರವಾಗಿ ಸೇರಿ ಬೈರಮಂಗಲ ಕೆರೆ ಕಲುಷಿತವಾಗಿರುವುದನ್ನು ಗಮನಿಸಿ ಈ ಕೆಳಕಂಡ ಯೋಜನೆಗಳನ್ನು ಬೆಂಗಳೂರು ಜಲಮಂಡಲಿಯಿಂದ ರೂಪಿಸಲಾಗಿದೆ.

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಟ್ಟ ಹಿಂದಿನ ರಾಜರಾಜೇಶ್ವರಿ ನಗರ ಸಭೆಯ ಬಹುತೇಕ ಪ್ರದೇಶಗಳಲ್ಲಿ ಮತ್ತು ಕೆಂಗೇರಿ ಪುರಸಭೆ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ಒಳಚರಂಡಿ ತ್ಯಾಜ್ಯ ನೀರು ಬೈರಮಂಗಲ ಕೆರೆಗೆ ಈಗ ಸೇರುತ್ತಿದ್ದು ಅದನ್ನು ತಪ್ಪಿಸುವ ಸಲುವಾಗಿ ಕೆ.ಎಂ.ಆರ್.ಪಿ. ಯೋಜನೆಯಡಿಯಲ್ಲಿ ಜೆ.ಎನ್.ಎನ್.ಯು.ಆರ್.ಎಂ. ಮತ್ತು ವಿಶ್ವಬ್ಯಾಂಕ್ ಸಹಭಾಗಿತ್ವದ ಆರ್ಥಿಕ ನೆರವಿನೊಂದಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಈ ತ್ಯಾಜ್ಯ ನೀರನ್ನು ಸಂಸ್ಕರಿಸಲು ಕೆಂಗೇರಿ ಮತ್ತು ದೊಡ್ಡಬೆಲೆ ಸ್ಥಳಗಳಲ್ಲಿ ಒಟ್ಟು ಎರಡು ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

2) ಇದರ ಜೊತೆ ಪರಿಸರ ಕ್ರಿಯಾ ಯೋಜನೆ – ಬಿ ಅಡಿಯಲ್ಲಿ ನಗರದ ವೃಷಭಾವತಿ ಕಣಿವೆಯ ಹಾಲಿ ಒಳಚರಂಡಿ ವ್ಯವಸ್ಥೆಯ ಪುನರುಜ್ಜೀಕರಣ ಕೆಲಸಗಳನ್ನು ರೂ. 100 ಕೋಟಿಗಳ ಮೊತ್ತದಲ್ಲಿ ಸಹ ತೆಗೆದುಕೊಳ್ಳಲಾಗುತ್ತಿದೆ. ಇದರಿಂದ ತೆರೆದ ಚರಂಡಿಯಲ್ಲಿ ಹರಿಯುತ್ತಿರುವ ತ್ಯಾಜ್ಯ ನೀರನ್ನು ತಡೆಗಟ್ಟಲು ಮತ್ತು ಆ ತ್ಯಾಜ್ಯ ನೀರನ್ನು ಕೊಳವೆಗಳ ಮುಖಾಂತರ ವೃಷಭಾವತಿ ವ್ಯಾಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸಂಸ್ಕರಣೆಗಾಗಿ ತೆಗೆದುಕೊಂಡು ಹೋಗಲು ಸಹಾಯವಾಗುವುದು.

3) ಇದಲ್ಲದೇ ಹಾಲಿ ವೃಷಭಾವತಿ ಕಣಿವೆಯಲ್ಲಿರುವ 180 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಉನ್ನತೀಕರಿಸಿ 300 ದಶ ಲಕ್ಷ ಲೀಟರ್

ಸಾಮರ್ಥ್ಯದ ಒಂದು ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಯೋಜನೆಯನ್ನು ರೂಪಿಸಲಾಗಿದೆ.

ಮೇಲೆ ತಿಳಿಸಿರುವ ಎಲ್ಲಾ ಯೋಜನೆಗಳನ್ನು 2014ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಎಲ್ಲಾ ಯೋಜನೆಗಳು ಕಾರ್ಯಗತವಾದ ನಂತರ ಬೈರಮಂಗಲ ಕೆರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ ಹರಿದು ಬರುತ್ತಿರುವ ತ್ಯಾಜ್ಯ ನೀರು ಸೇರುವುದನ್ನು ತಡೆಗಟ್ಟಲಾಗುವುದು.

ಇ) ಮತ್ತು ಈ) ಸದರಿ ಸಮಸ್ಯಾತ್ಮಕ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರಿನ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವ ಸಲುವಾಗಿ ಮಳವಳ್ಳಿ ತಾಲ್ಲೂಕಿನ ಮುತ್ತತ್ತಿ ಬಳಿ ಕಾವೇರಿ ನದಿಯಿಂದ ಪೈಪ್‌ಲೈನ್ ಮುಖಾಂತರ ರಾಮನಗರ ತಾಲ್ಲೂಕಿನ ಬೈರಮಂಗಲ ಬಹುಗ್ರಾಮ ಯೋಜನೆಯಡಿ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವ ಕುರಿತಂತೆ ಆರ್ಥಿಕ ಮತ್ತು ತಾಂತ್ರಿಕ ಕಾರ್ಯ ಸಿಂಧುತ್ವವನ್ನು ಪರಿಶೀಲಿಸಲಾಗುತ್ತಿದೆ. ಆದರೆ, ಈ ಅಂದಾಜು ಮೊತ್ತ ಹೆಚ್ಚಾಗುವ ಕಾರಣ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾರೋಹಳ್ಳಿ ಮಾರ್ಗದಿಂದ ಬೆಂಗಳೂರಿಗೆ ಕಾವೇರಿ ನೀರು ಸರಬರಾಜು ಮಾಡುವ ಪೈಪ್‌ಲೈನ್ ಮುಖೇನ ನೀರು ಪಡೆದುಕೊಳ್ಳಲು ಅನುಮತಿಸಿದ್ದಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸದರಿ ಸಮಸ್ಯಾತ್ಮಕ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ವ್ಯವಸ್ಥೆ ಮಾಡಲು ಅನುಕೂಲವಾಗಲಿದೆ. ಈ ಕುರಿತಂತೆ ಸಮಾಲೋಚನೆ ನಡೆದಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಬೆಂಗಳೂರಿನ ಕೊಳಚೆ ನೀರು ಬೈರಮಂಗಲ ಕೆರೆಗೆ ಬರುತ್ತದೆ. ಅದಕ್ಕೆ ಶುದ್ಧೀಕರಣ ಘಟಕ ಹಾಕುತ್ತೇವೆ, 2014ರಲ್ಲಿ ಅದನ್ನು ಪೂರ್ಣಗೊಳಿಸುತ್ತೇವೆ ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದು ಸ್ವಾಗತಾರ್ಹ. ಆದರೆ ಅಲ್ಲಿ ನೀರು ಬಹಳ ಕಲುಷಿತವಾಗಿದ್ದು, ಕುಡಿಯಲು ಯೋಗ್ಯವಾಗಿಲ್ಲದೇ ಇರುವುದರಿಂದ ಸುತ್ತಮುತ್ತ ಇರುವವರಿಗೆ ಸಮಸ್ಯೆಯಾಗುತ್ತಿದ್ದು, ಬೋರ್‌ವೆಲ್‌ಗಳಲ್ಲಿ ಕೊಳಚೆ ನೀರು ಬರುತ್ತಿರುವುದರಿಂದ ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಕೊಡಿ ಎಂದು ನಾವು ಕೇಳಿದ್ದೆವು. ಅದಕ್ಕೆ ನೀವು ಎರಡು ಆಪ್ಷನ್ ಕೊಟ್ಟಿದ್ದೀರಿ. ಒಂದು, ಮಳವಳ್ಳಿ ತಾಲ್ಲೂಕು ಮುತ್ತತ್ತಿ ಬಳಿ ಕಾವೇರಿ ನದಿಯಿಂದ ಪೈಪ್‌ಲೈನ್ ಮುಖಾಂತರ ರಾಮನಗರ ತಾಲ್ಲೂಕು ಬೈರಮಂಗಲಕ್ಕೆ ಬಹುಗ್ರಾಮ ಯೋಜನೆಯಡಿ ಶುದ್ಧ ಕುಡಿಯುವ ನೀರನ್ನು ಕೊಡುವ ಯೋಜನೆಯಿದೆ.

ಅದರೆ ಅದು ದುಬಾರಿಯಾಗಿರುವುದರಿಂದ, ಬೆಂಗಳೂರಿಗೆ ಬರುವ ನೀರನ್ನು ಕೊಡುತ್ತೇವೆ. ಅದನ್ನು ಆರ್.ಡಿ.ಪಿ.ಆರ್. ಇಲಾಖೆಯವರು ತೆಗೆದುಕೊಂಡು ಹೋಗಬೇಕು, ಆ ಪ್ರಸ್ತಾವನೆ ಸಮಾಲೋಚನೆಯಲ್ಲಿದೆ ಎಂದು ಹೇಳಿದ್ದಾರೆ. ಈ ಸಮಾಲೋಚನೆಯನ್ನು ಯಾವಾಗ ಮುಗಿಸುತ್ತೀರಿ? ನಮಗೆ ಶುದ್ಧ ಕುಡಿಯುವ ನೀರನ್ನು ಯಾವಾಗ ಕೊಡುತ್ತೀರಿ? ಇದು ನಿಮ್ಮ ಕೈಯಲ್ಲೇ ಇದೆ. ನೀವು ಪರ್ಮಿಷನ್ ಕೊಟ್ಟರೆ ಆರ್.ಡಿ.ಪಿ.ಆರ್ ನವರು ಮಾಡುತ್ತಾರೆ. ಇದನ್ನು ಯಾವಾಗ ಮಾಡುತ್ತೀರಿ? ಎಷ್ಟು ದಿವಸದಲ್ಲಿ ಮಾಡುತ್ತೀರಿ? ಎಷ್ಟು ದಿವಸದಲ್ಲಿ ಅಲ್ಲಿ ಕುಡಿಯುವ ನೀರು ಇಲ್ಲದೇ ಬಹಳಷ್ಟು ತೊಂದರೆಯಾಗಿರುವುದರಿಂದ ಬೈರಮಂಗಲ ಮತ್ತು ಅದರ ಸುತ್ತಮುತ್ತ ಇರುವ ಗ್ರಾಮಗಳಿಗೆ ಎಷ್ಟು ದಿವಸದಲ್ಲಿ ಕುಡಿಯುವ ನೀರು ಕೊಡುವ ವ್ಯವಸ್ಥೆ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್: ಬಹಳ ವಿಸ್ತಾರವಾದ ಉತ್ತರವನ್ನು ನಾವು ಕೊಟ್ಟಿದ್ದೇವೆ. ಬಾಲಕೃಷ್ಣ ರವರಿಗೂ ಗೊತ್ತಿದೆ. ಕಾವೇರಿಯಿಂದ ಬೆಂಗಳೂರಿಗೆ ತರುತ್ತಿರುವ ನೀರು ಬೆಂಗಳೂರಿನ ನಾಗರಿಕರಿಗೇ ಅಗತ್ಯ ಪ್ರಮಾಣದಲ್ಲಿ ಸಿಗುತ್ತಿಲ್ಲ. As on today, ನಮಗೆ ಬೇಕಾಗಿರುವುದು 1,300 ದಶಲಕ್ಷ ಲೀಟರ್ ನೀರು. ಆದರೆ ನಮಗೆ ದೊರಕುತ್ತಿರುವುದು 900 ದಶಲಕ್ಷ ಲೀಟರ್ ನೀರು ಮಾತ್ರ. ಅವರು ಹಾರೋಹಳ್ಳಿಯಿಂದ ಕೊಡಬೇಕೆಂದು ಕೇಳಿದ್ದಾರೆ. ಅದರ ಬಗ್ಗೆ ಈಗ ನಾವು ಆರ್.ಡಿ.ಪಿ.ಆರ್.ರವರ ಜೊತೆ ಮಾತನಾಡುತ್ತಿದ್ದೇವೆ. ಹಾರೋಹಳ್ಳಿಯಿಂದ ಕೊಡುವುದು ನಮಗೆ ಕಷ್ಟವಾಗುತ್ತದೆ. ಆದರೂ ಕೂಡ, ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಕೊಡುವುದಕ್ಕೋಸ್ಕರವಾಗಿ ನಾವು ಆರ್.ಡಿ.ಪಿ.ಆರ್.ರವರ ಜೊತೆ ಚರ್ಚೆ ಮಾಡಿ ಅದನ್ನು ಮಾಡುತ್ತೇವೆ. ಬೈರಮಂಗಲ ಕೆರೆಗೆ ಹೋಗುತ್ತಿರುವ ತ್ಯಾಜ್ಯ ನೀರನ್ನು ಸಂಪೂರ್ಣವಾಗಿ ನಿಯಂತ್ರಣ ಮಾಡಲು ನಾವು ಕೆ.ಎಂ.ಆರ್.ಪಿ. ಯೋಜನೆಯಡಿಯಲ್ಲಿ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಜೊತೆಗೆ, ಬೇರೆಬೇರೆ ಪೈಪ್‌ಲೈನ್ ಹಾಕುವುದನ್ನೂ ಶುರು ಮಾಡಿದ್ದೇವೆ. 2014ನೇ ಇಸವಿಗೆ ಈ ಯೋಜನೆ ಸಂಪೂರ್ಣವಾಗಿ ಮುಗಿಯುತ್ತದೆ, ತ್ಯಾಜ್ಯ ನೀರು ಕೆರೆಗೆ ಹರಿಯುವದನ್ನು ಸಂಪೂರ್ಣವಾಗಿ ನಿಲ್ಲಿಸುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಬೆಂಗಳೂರಿನ ನಾಗರಿಕರ ಸಮಸ್ಯೆಯನ್ನು ನೀವು ಅರ್ಥಮಾಡಿಕೊಂಡಿರುವುದರಿಂದ ಹೇಳುತ್ತಿದ್ದೀರಿ. ಅದೇ ರೀತಿ ನನ್ನ ಕ್ಷೇತ್ರದಲ್ಲಿರುವ ಸಮಸ್ಯೆಯನ್ನೂ ತಾವು ಅರ್ಥಮಾಡಿಕೊಳ್ಳಬೇಕು. ನೀವು ಅಲ್ಲಿಗೆ ಕುಡಿಯುವ ನೀರನ್ನು ಕೊಡಲೇಬೇಕು. ನೀವು ಎಷ್ಟೇ ಕ್ಲೀನ್ ಮಾಡಿದರೂ ಸಹ ಅಲ್ಲಿಗೆ ಗಲೀಜು ನೀರು

ಬರುವುದನ್ನು ತಪ್ಪಿಸಲು ಆಗುವುದಿಲ್ಲ. ಗಲೀಜು ನೀರು ಆ ಕೆರೆಗೆ ಬಂದೇ ಬರುತ್ತದೆ. ಆ ಕೆರೆಯನ್ನು ಬಿ.ಬಿ.ಎಂ.ಪಿ ಯವರು ದತ್ತು ತೆಗೆದುಕೊಂಡು ಅದನ್ನು ಸ್ವಚ್ಛ ಮಾಡುವುದು, ಹೂಳು ಎತ್ತುವುದನ್ನಾದರೂ ಮಾಡಬೇಕು. ಅಲ್ಲಿಗೆ ನೀವು ಪರ್ಯಾಯ ಕುಡಿಯುವ ನೀರನ್ನು ಕೊಡಲೇಬೇಕು. ಮಳವಳ್ಳಿ ತಾಲೂಕು ಮುತ್ತತ್ತಿ ಬಳಿ ಕಾವೇರಿ ನದಿಯಿಂದ ಪೈಪ್‌ಲೈನ್ ಮುಖಾಂತರ ಕೊಡುತ್ತೇವೆ ಎಂದು ಪರ್ಯಾಯ ಮಾರ್ಗವನ್ನೂ ನೀವೇ ಹೇಳಿದ್ದೀರಿ. ಎರಡರಲ್ಲಿ ಯಾವುದಾದರೊಂದನ್ನು ಮಾಡುವುದಕ್ಕೆ ದಯಮಾಡಿ ನೀವೇ ತೀರ್ಮಾನ ತೆಗೆದುಕೊಳ್ಳಿ.

ಡಾ: ಹೆಚ್.ಸಿ. ಮಹಾದೇವಪ್ಪ: ಮಾನ್ಯ ಪೌರಾಡಳಿತ ಸಚಿವರು ಮತ್ತು ಕಾನೂನು ಸಚಿವರಾದಂಥ ಸನ್ಮಾನ್ಯ ಸುರೇಶ್‌ಕುಮಾರ್‌ರವರಿಗೆ ಹೆಚ್ಚು ಮಾಹಿತಿಗಳಿವೆ. He is a knowledgeable Minister. Surface water ಅನ್ನು ಎಲ್ಲ ಪ್ರದೇಶಗಳಿಗೆ ಕೊಡಬೇಕೆಂದು ಹೇಳಿ, R.D.P.R. and Urban Development Department, Government of India ಇವರು ಈಗಾಗಲೇ ಅನೇಕ ಯೋಜನೆಗಳನ್ನು ಮಂಜೂರು ಮಾಡಿದ್ದಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ನಾನು ಕೇಳಿರುವುದು ಬೈರಮಂಗಲ ಕೆರೆಗೆ ಸಂಬಂಧಪಟ್ಟಂಥ ಪ್ರಶ್ನೆ. ಈ ವಿಚಾರ ಬಂದಾಗ ನೀವು ಇಡೀ ರಾಜ್ಯದ surface water ಮುಂತಾದ ವಿಚಾರಗಳನ್ನು ಕೇಳಿದರೆ ಆಗುತ್ತದೆಯೇ? ನಮ್ಮ ಈ ಸಮಸ್ಯೆಗೆ ನಮಗೆ ಸರಿಯಾದ ಉತ್ತರ ಬೇಕು. ಬೇರೆ ಯವುದೋ ವಿಚಾರವನ್ನು ತೆಗೆದುಕೊಂಡು, ಪ್ರಶ್ನೆಯನ್ನು dilute ಮಾಡುವುದು ಬೇಡ.

ಡಾ: ಹೆಚ್.ಸಿ. ಮಹದೇವಪ್ಪ: ನಿಮ್ಮ ವಿಚಾರಕ್ಕೇ ಬರುತ್ತಿದ್ದೇನೆ. ನಗರ ಪ್ರದೇಶಗಳಿಗೆ ನೀರನ್ನು ತರುವಾಗ ಅಲ್ಲಿರುವ en-route ಹಳ್ಳಿಗಳಿಗೆ ನೀರನ್ನು ಸರಬರಾಜು ಮಾಡಲು ಕೇಂದ್ರ ಸರ್ಕಾರ, ಪೌರಾಡಳಿತ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಜಂಟಿಯಾಗಿ ಕೆಲಸ ಮಾಡಿ, ಅನೇಕ ಯೋಜನೆಗಳನ್ನು ಜಾರಿ ಮಾಡಿ, ಅನುಷ್ಠಾನ ಮಾಡುತ್ತಿದ್ದಾರೆ. ಈಗ ಅವರ ಜೊತೆಯಲ್ಲಿ ಚರ್ಚೆ ಮಾಡಬೇಕಾದಂಥ ಅಗತ್ಯವಿಲ್ಲ. Already this Scheme is in operation. ಮಾನ್ಯ ಸದಸ್ಯರಾದ ಬಾಲಕೃಷ್ಣರವರು ಏನು ಕೇಳಿದ್ದಾರೆ. ಅದಕ್ಕೆ examine ಮಾಡಬೇಕಾದಂಥ ಅಗತ್ಯವಿಲ್ಲ. This scheme is in operation. So many projects have been approved. Some projects are functioning. MInerals and Fluoride content ಗಳನ್ನು ಕಡಿತಗೊಳಿಸಿ Safe Drinking water

ಕೊಡುವುದಕ್ಕೆ ಇಂಥ ಯೋಜನೆ ಈಗಾಗಲೇ ರಾಜ್ಯದಲ್ಲಿ ಅನುಷ್ಠಾನವಾಗಿದೆ. ನಾನು ಆರ್.ಡಿ.ಪಿ.ಆರ್. ಮಿನಿಸ್ಟರ್ ಆಗಿದ್ದಾಗಲೇ ಇಂಥಾದ್ದನ್ನು ಮಾಡಿದ್ದೇವೆ. ಶೋಭಾ ಕರಂದ್ಲಾಜೆಯವರು ಸಚಿವರಾಗಿದ್ದಾಗ ಅದನ್ನು ಮುಂದುವರೆಸಿದರು. ಈಗ ಜಗದೀಶ್ ಶೆಟ್ಟರ್‌ರವರೂ ಮಾಡುತ್ತಾರೆ. ಅದನ್ನು ಮಾಗಡಿಯಲ್ಲಿ ಮಾಡುವುದಕ್ಕೆ ಏನು ತೊಂದರೆಯಿದೆ ಎಂದು ಬಾಲಕೃಷ್ಣರವರು ಕೇಳಿದ್ದಾರೆ. surface water ಅನ್ನು ಮೂಲದಿಂದ ತಂದು ಎಲ್ಲ en-route village ಗಳಿಗೆ ಸಪ್ಲೈ ಮಾಡುವುದಕ್ಕೆ ಸರ್ಕಾರದ ಮುಂದೆ ಈಗಾಗಲೇ ಯೋಜನೆ ಇದೆ.

ಶ್ರೀ ಹೆಚ್. ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ಬೇರೆ ವಿಚಾರ. ಅದು ನಿಮ್ಮ ಹಳ್ಳಿಗಳಲ್ಲಿ ಆಗಿರತಕ್ಕಂಥ problems. ಆದರೆ, ಈ ಸಮಸ್ಯೆ ಬೆಂಗಳೂರಿನಿಂದ ಹರಿದು ಬರುವ ಹೊಲಸು ನೀರಿನಿಂದ ಆಗಿತಕ್ಕಂಥದ್ದು. ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ನೀವೇನಾದರೂ ಅನುಷ್ಠಾನಕ್ಕೆ ತರದಿದ್ದರೆ, ಬಹುಶಃ ಮುಂದಿನ ದಿವಸಗಳಿಂದ ಪ್ರತಿರೋಧವನ್ನು ನಮ್ಮ ಜಿಲ್ಲೆಯಿಂದ ಸರ್ಕಾರ ಎದುರಿಸಬೇಕಾಗುತ್ತದೆ. ಈಗಾಗಲೇ ಹೋರಾಟ ಪ್ರಾರಂಭವಾಗಿದೆ. ಈ ಹೋರಾಟ ಪ್ರಾರಂಭವಾದರೆ ನೀವು ಬೆಂಗಳೂರಿಗೆ ಕೊಡತಕ್ಕಂಥ ನೀರಿಗೂ ಸಹ ತೊಂದರೆ ಆಗಬಹುದು. ದಯಮಾಡಿ ಇವುಗಳನ್ನೆಲ್ಲಾ ಪರಿಗಣನೆ ಮಾಡಿ ಈ ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರನ್ನು ಕೊಡತಕ್ಕಂಥಹ ವ್ಯವಸ್ಥೆಯನ್ನು ಮಾಡಬೇಕು. ನಾನು ಹೆಚ್ಚಿಗೆ ಏನೂ ಕೇಳುವುದಿಲ್ಲ. ಎಲ್ಲಿ ತೊಂದರೆಯಾಗಿದೆ. ಆ ಹಳ್ಳಿಗಳಿಗೆ ಶುದ್ಧ ಕುಡಿಯುವ ಕಾವೇರಿ ನೀರನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ಕೇಳತಕ್ಕಂಥ ಮಾನ್ಯ ಬಾಲಕೃಷ್ಣರವರು ಸಹ ಬೆಂಗಳೂರಿಗೆ ನಾವೇನು ಕಾವೇರಿ ನೀರು ತರುತ್ತಿದ್ದೇವೆ, ಆ ಕಾವೇರಿ ನೀರನ್ನೇ ಕುಡಿದುಕೊಂಡು ಇವತ್ತು ಜೀವನ ಮಾಡುತ್ತಿರುವುದು. ಪರಿಸ್ಥಿತಿ ಏನು ಎಂದು ಅವರಿಗೆ ಚೆನ್ನಾಗಿ ಗೊತ್ತಿದೆ. ನಾನು ಮಾನ್ಯ ಮಹದೇವಪ್ಪನವರಿಗೆ ಧನ್ಯವಾದವನ್ನು ಹೇಳುತ್ತೇನೆ. ತಾವು ಹೇಳಿದ ಹಾಗೆ ನಿಜವಾಗಿಯೂ ಕೂಡ RDPR ಇಲಾಖೆಯಿಂದ enroute villages ಗೆ ಕೊಡುವ ಕಾರ್ಯಕ್ರಮವಿದೆ. ನಾವು ಈಗಾಗಲೇ ಅದೇ ದೃಷ್ಟಿಯಿಂದ RDPR ಇಲಾಖೆಯಲ್ಲಿ ಚರ್ಚೆ ಮಾಡಿ enroute villagesಗೆ ಕೊಡುವುದಕ್ಕೆ ಕಾರ್ಯಕ್ರಮವನ್ನು ರೂಪಿಸುತ್ತಿದ್ದೇವೆ. ಅವರ ಜೊತೆಗೆ ಚರ್ಚೆ ಮಾಡುತ್ತೇವೆ.

ಆದರೆ, BWSSB ಯದು ನಮ್ಮ project ಏನಿದೆ, JICA ದಿಂದ loan ತೆಗೆದುಕೊಂಡು ನಾವು ಮಾಡುತ್ತಿರುವುದು. ಇಲ್ಲಿಯವರೆಗೆ ನಾವು 500 ದಶಲಕ್ಷ ನೀರು ತರುವುದಕ್ಕೆ ಹೊರಟಿರುವುದು. ಯಾವುದೇ ಕಾರಣಕ್ಕೆ ಮಧ್ಯೆ ಅದನ್ನು tap ಮಾಡುವುದಕ್ಕೆ ಬಿಡುವುದಿಲ್ಲ, ಆಗುವುದಿಲ್ಲ. ಆದರೂ ಕೂಡ, ಮಾನ್ಯ ಬಾಲಕೃಷ್ಣರವರು ಹೇಳುತ್ತಿರುವುದರಿಂದ ನಾವು RDPR ಜೊತೆ ಚರ್ಚೆ ಮಾಡಿ ಮಾಡುತ್ತೇವೆ. ಇನ್ನೊಂದು ಹೆಜ್ಜೆ ಮುಂದೆ ಹೋಗಿ ಆ ಬೈರಮಂಗಲದ ಕೆರೆ ಹತ್ತಿರ ಏನು ತ್ಯಾಜ್ಯ ಸೇರುತ್ತಿದೆ, ಅದನ್ನು ನಿಲ್ಲಿಸಲಿಕ್ಕೆ RDPR ಮತ್ತು ನಾವು ಸೇರಿಕೊಂಡು ಅಲ್ಲಿಯೇ ಒಂದು STP ಹಾಕುವುದಕ್ಕೂ ಕೂಡ ನಾವು ಹೆಜ್ಜೆಯನ್ನು ನಾವು ತೆಗೆದುಕೊಳ್ಳುತ್ತೇವೆ.

ಕ್ರೀಡಾಂಗಣ ನಿರ್ಮಾಣ

83 (187) ಶ್ರೀ ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ):– ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ?

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಇಂಡಿ ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣ ಕಾರ್ಯ ಎಂದು ಪ್ರಾರಂಭಿಸಲಾಯಿತು ಮತ್ತು ಈ ಕಾಮಗಾರಿ ಯಾವ ಹಂತದಲ್ಲಿದೆ?

ಆ) ನಿರ್ಮಿತಿ ಕೇಂದ್ರದವರು ಈ ಕಾಮಗಾರಿಯನ್ನು ಸರಿಯಾಗಿ ಮಾಡದೇ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು):–

ಅ) ಕ್ರೀಡಾಂಗಣದ ಕಾಮಗಾರಿಯು ದಿನಾಂಕ: 21–03–2011 ರಂದು ಪ್ರಾರಂಭಿಸಲಾಗಿದೆ.

ಇಲ್ಲಿಯವರೆಗೆ ಮೈದಾನ ಸಮತಟ್ಟುಗೊಳಿಸುವಿಕೆ ಹಾಗೂ ಪೆವಿಲಿಯನ್ ಕಟ್ಟಡದ ನಿರ್ಮಾಣದ ತಳಪಾಯ ಹಾಕುವ ಕಾರ್ಯ ಪ್ರಗತಿಯಲ್ಲಿದೆ.

ಆ) ಉದ್ದೇಶಿತ ಕ್ರೀಡಾಂಗಣವನ್ನು ನಿರ್ಮಿಸಲು ನಿರ್ಮಿತಿ ಕೇಂದ್ರದವರಿಗೆ ವಹಿಸಲಾಗಿತ್ತು. ಆದರೆ ಉದ್ದೇಶಿತ ಕ್ರೀಡಾಂಗಣದ ಪ್ರದೇಶದ ಪೈಕಿ ಭಾಗಶ: ಪ್ರದೇಶವು